ನುಧಾರಣೆ ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ ಎಂದು ಹೇಳಿದರು. ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಅಡ್‌ಹಾಕ್ ಗ್ರಾಂಟ್‌ನಿಂದ ಹಣವನ್ನು ಕೊಟ್ಟಿದ್ದಾರೆ ? ಈ ಹಣ ಪಂಚಾಯಿತಿಗಳಿಗೆ ಪಾವತಿಯಾಗಿದೆಯೇ ? ಹಣ ಕೊಡಲಿಕ್ಕೆ ಸರ್ಕಾರದ ಹುಕ್ಕುಂ ಇದ್ದರೂ 100ಕ್ಕೆ 10 ಭಾಗ ಅವರ ಉತ್ಪನ್ನದಲ್ಲಿ ಕೊಟ್ಟಿದ್ದರೂ ಅವರಿಗೆ ಸಿಕ್ಕಿಲ್ಲ. ಮಾನ್ಯ ಸಚಿವರು ಹೇಳಿದ ಹಾಗೆ 10 ಪರ್ಸೆಂಟ್ ಇರುವುದನ್ನು 20 ಪರ್ಸೆಂಟಿಗೆ ಏರಿಸಿ ಪಂಚಾಯಿತಿಗಳ ಗ್ರಾಮರಾಜ್ಯವನ್ನು ರಾಮರಾಜ್ಯವನ್ನಾಗಿ ಮಾಡುವುದಕ್ಕೆ ಏನಾದರೂ ಕೆಲಸ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಎಲ್ಲಾ ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇವೆ.

## Payment of Bilis of M/s Udhaya Construction Co.

110. Sri M. H. JAYAPRAKASH NARAYAN (Sirsi).—

Sri J. P. SARVESH (Sedam).— and

Sri J. L. KABADE (Ballolli).—

Will the Minister for Law and Municipal Administration be pleased to state :—

(*a*) the date on which the construction of Gandhinagar Girls High School, ground floor was entrusted for execution on tender basis to Messrs Udhaya Construction Company Limited, Bangalore ;

(*b*) the date on which the construction of the School Building was completed ;

(*c*) the date on which the then Governor, H. H. Sri Jayachama raja Wodeyar opened the building ;

(*d*) the reason for not making payment of the final bill till to-day

(*e*) the action taken on the letter No. AE (G) PR 123 73-74 dated 29-4-1973 addressed by the Assistant Engineer, Gandhinagar Range, Corporation of Bangalore to the Deputy Engineer, (S and C) and copy sent to M/s. Udhaya Construction Company Limited, Bangalore ;

(*f*) what is the reason that the Chief Engineer (C and B) has not informed the Corporation the address of the Junior Engineer, Sri V. S. Sambanda Murthy and the Assistant Engineer, Sri Subba Rao for want of signature ;

(*g*) when the claims of M/s. Udhaya Constrnction Company Limited, Bangalore, will be settled finally ?

Sri D. K. NAIKAR (Minister for Law and Municipal Administration)

(*a*) 8th September 1955.

(*b*) End of October 1958.

(*c*) 8th November 1958.

(*d*) The entries in the Measurement Book have not been signed by the then Junior Engineer and Check Certificates has not recorded on the Measurement Book and the Bill by the then Assistant Engineer. On account of this, the bill is presumed to have been held up.

(*e*) The Chief Engineer (C and B) was addressed to furnish the present address of the Junior Engineer and the Assistant Engineer concerned who were in change of the above work in order to require them to furnish a Certificate on the Final Bill and the Measurement Book.

(*f*) The addresses required have been since furnished. The letters have already been addressed to the concerned.

(*g*) The Corporation Engineer has addressed the two officers concerned requiring them to furnish necessary Certificate on the Bills and Measurement Book. The Chief Engineer, Corporation has been instructed that the pending claim should be settled immediately.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಉದಯ ಕನ್‌ಸ್ಟ್ರಕ್ಷನ್ ಕಂಪನಿಗೆ 1955ನೇ ಸಾಲಿನಲ್ಲಿ ನೀವು ವಹಿಸಿಕೊಟ್ಟ ಕಟ್ಟಡದ ಅಂದಾಜು ಹಣ ಎಷ್ಟು ? ಇದರಲ್ಲಿ ಆ ಕಂಪನಿಗೆ ಕೊಟ್ಟಿರತಕ್ಕ ಹಣ ಎಷ್ಟು ? ಕೊಡಬೇಕಾದ ಬಾಕಿ ಹಣ ಎಷ್ಟು ?

†ಶ್ರೀ ಡಿ. ಕೆ ನಾಯ್ಕರ್.—ಈ ಕಟ್ಟಡಕ್ಕೆ ಸಂಬಂಧಪಟ್ಟಂತೆ ಅಂದಾಜು ಹಣ 9 ಸಾವಿರ ರೂಪಾಯಿಗಳು. ಈ ಬಗ್ಗೆ ಫೈನಲ್ ಬಿಲ್ 85 ಸಾವಿರ ಚಿಲ್ಲರೆ ರೂಪಾಯಿಗಳು ಒಳಗೆ ಕೊಟ್ಟಿದೆ. ಈಗಾಗಲೇ 76 ಸಾವಿರ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, 20 ವರ್ಷಗಳ ಕಾಲವಾಗಿದೆ. ಆಗ ಜೂನಿಯರ್ ಇಂಜಿನಿಯರ್ ಆಗಿದ್ದವರು ಈಗ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಹಾಸಿಂಗ್ ಬೋರ್ಡಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಆಗ ಅಸಿಸ್ಟೆಂಟ್ ಇಂಜಿನಿಯರ್ ಆಗಿದ್ದಂತಹ ಸುಬ್ಬರಾಯರು ಈಗ ಕೆ.ಆರ್.ಎಸ್. ಡಿವಿಜನ್‌ನಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿದ್ದಾರೆ. ಇವರ ವಿಳಾಸ ಸಿಕ್ಕಲಿಲ್ಲ. ಈಗ ಸಿಕ್ಕಿದೆ ಅವರಿಗೆ ಬರೆಯುವಾಗಿದೆ ಎಂದು ಹೇಳಿದ್ದೀರಿ. 20 ವರ್ಷಗಳ ಕಾಲವಾದರೂ ಇದನ್ನು ವಿಲೇವಾರಿ ಮಾಡತಕ್ಕ ಕೆಲಸ ಮಾಡಿಲ್ಲ. ಇದಕ್ಕೆ ಮೂಲ ಕಾರಣ ಏನು ? ಈ ರೀತಿ ವಿಲೇವಾಡದೇ ಇರತಕ್ಕ ಆಫೀಸರುಗಳ ಮೇಲೆ ಏನು ಕ್ರಮ ಜರುಗಿಸುತ್ತೀರಿ ?

ಶ್ರೀ ಡಿ. ಕೆ ನಾಯ್ಕರ್.—20 ವರ್ಷಗಳ ಕಾಲ ಅವರ ಅಸ್ಸೆಸ್ ಸಿಕ್ಕಲಿಲ್ಲ ಎಂದು ಹೇಳಲಿಲ್ಲ. ಮೆಜರ್‌ಮೆಂಟ್ ಬುಕ್ ಸೈನ್ ಆಗಿರಲಿಲ್ಲ ಎಂದು ಹೇಳಿದ್ದೇನೆ. ಪ್ರೋಸ್ ಮಾಡುವುದರಲ್ಲಿ ವಿಳಂಬ ಆಗಿದೆ. ಈಗಾಗಲೇ ಅಸ್ಸೆಸ್ ಕೊಟ್ಟಿದ್ದಾರೆ, ಅವರ ಕ್ಲೈಮನ್ನು ಕಂಪ್ಲೀಟ್ ಮಾಡಲಿಕ್ಕೆ ಹೇಳಿದ್ದಾರೆ ಸ್ವಲ್ಪ ದಿವಸದಲ್ಲಿ ಫೈನಲ್ ಬಿಲ್ ವಿಲೇವಾರಿ ಮಾಡುವುದು ಇದೆ.

Sri J. P. SARVESH,—The building was completed in 1958. Nearly 17 years have already passed. So, I want to know how much more time is required to settle the final Bill ?

Sri D. K. NAIKAR.—As soon as the check certificate is issued by the Junior Engineer and the Assistant Engineer, payment will be made.

ಶ್ರೀ ಜೆ. ಎರ್. ಕವಾಡಿ.—ಉದಯ ಕನ್‌ಸ್ಟ್ರಕ್ಷನ್ ಕಂಪೆನಿಗೆ ಬಾಕಿ ಕೊಡುವ ವಿಷಯದಲ್ಲಿ ಕೇಳಿದಂತಹ ಪ್ರಶ್ನೆಗೆ 1955ರಲ್ಲಿ ಕಂಟ್ರಾಕ್ಟ್ ಕೊಟ್ಟಿದ್ದು ; 1958ನೇ ಇನವಿ ಅಕ್ಟೋಬರ್ ಅಂತ್ಯದಲ್ಲಿ ಕಟ್ಟಿಡ ತಯಾರು ಮಾಡಿದ್ದಾರೆ ; 8-11-1958ರಲ್ಲಿ ಪೂರ್ತಿ ಮಾಡಿದ್ದಾರೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇಂಜಿನಿಯರ್ಸ್ ಪ್ರತಿ ನಿತ್ಯ ಡೈರಿ ಬರೆದು ರೆಕ್ಕಾಚಾರ ಎಷ್ಟೆಷ್ಟು ಆಗುತ್ತದೆ, ಎಸ್ಟಿಮೇಟ್ ಎಷ್ಟು ಎಂಬುದನ್ನೆಲ್ಲಾ ನೋಡಿ ರೆಕ್ಕ ಕೊಡಬೇಕು ಎಂದು ಮಾಡಿರುತ್ತಾರೆ ಹಾಗೆ ಮಾಡಿದ್ದರೂ ಸಹಿತ ರೆಕ್ಕ ಕೊಡಲಿಲ್ಲ. ಇದು 20 ವರ್ಷದ ವಿಚಾರ. ಅಕೆಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ಚೀಫ್ ಇಂಜಿನಿಯರ್ ಇದನ್ನು ನೋಡದೇ ಬಿಟ್ಟಿದ್ದಕ್ಕೆ ಸರ್ಕಾರದವರು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಡಿ. ಕೆ. ನಾಯ್ಕರ್.—ಕಂಟ್ರಾಕ್ಟ್‌ದಾರರು ಕೂಡ ಇಲ್ಲಿಯವರೆಗೆ ಸುಮ್ಮನೆ ಇದ್ದರು. ಸರ್ಕಾರಕ್ಕೆ ಕೇಳಿದ್ದರೆ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಈಗಾಗಲೇ ಕೇಳಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿದೆ ಎಂದು ಹೇಳಿದ್ದೇನೆ. ಪುನಃ ಇದರಲ್ಲಿ ಹೇಳುವುದು ಏನು ಉಳಿದಿದೆ.

Sri N. G. HALAPPA.—As I could see, the lapses are on the part of the Government officers. I feel that the Contractor is entitled for the interest also in addition to his dues. Therefore, will the Government pay the interest to the Contractor as the lapses are on the part of Government officers ?

Sri D. K. NAIKAR.—I have made it clear that action is being taken in the matter.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಒಬ್ಬ ಕಂಟ್ರಾಕ್ಟರ್‌ದಾರ ಒಂದು ಕಟ್ಟಡವನ್ನು ಕಟ್ಟಿ ಮುಗಿಸಿ 17 ವರ್ಷವಾಗಿದೆ. ಅವನ ಕ್ಲೇಮ್‌ನ್ನು ಸರ್ಕಾರ ಕೊಡುತ್ತೇವೆಂದು ಹೇಳಿದ್ದಾರೆ. ಈ ದಿವಸ ಆ ಕಂಟ್ರಾಕ್ಟ್‌ದಾರ ಬದುಕಿದ್ದಾನೆಯೋ ಇಲ್ಲವೋ? ತಾವು ಯಾರಿಗೆ ಆಕ್ಸೆಪ್ಟೆನ್ಸ್‌ನ್ನು ಸೆಟ್ಲ್ ಮಾಡಬೇಕು ? ಆ ಕಂಟ್ರಾಕ್ಟರ್‌ದಾರ ಬದುಕಿದ್ದಾನೆಯೇ ಹೇಗೆ ? ಅವನ ವಾರಸುದಾರ ಅಫಿಡವಿಟ್ ಕೊಟ್ಟು ಕೋರ್ಟಿಗೆ ತಿರ ಗಿದ್ದಾನೆಯೇ ?

ಶ್ರೀ ಡಿ. ಕೆ. ನಾಯಕರ್.—ಪ್ರಶ್ನೆ ಹಾಕಲಿಕ್ಕೆ ಮುತುವರ್ಜಿ ಮಾಡಿದ್ದಾರೆ. ಆ ಕಂಟ್ರಾಕ್ಟ್‌ದಾರ ಜೀವಂತವಾಗಿದ್ದಾನೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಜೆ. ಎಚ್. ಕಬಾಡಿ.—ಕಡೆಯದಾಗಿ ಸಂಬಂಧಪಟ್ಟ ನಗರಸಭೆಯ ಇಂಜಿನಿಯರ್ ಪತ್ರ ಬರೆದಿದ್ದಾರೆಂದು ಹೇಳಿದ್ದೀರಿ. ಅವರು ಪತ್ರವನ್ನು ಎಂದು ಬರೆದಿದ್ದಾರೆ ? ಮತ್ತು ಅವರು ಯಾವುದಕ್ಕಾಗಿ ಪತ್ರ ಬರೆದಿದ್ದಾರೆ ? ಬಿಲ್ಲನ್ನು ಫೈನಲ್ ಮಾಡಲಕ್ಕೆ ಬರೆದಿದ್ದಾರೆಯೇ ಹೇಗೆ ? ದಯವಿಟ್ಟು ಇದನ್ನು ನವಿಸ್ತಾರವಾಗಿ ಹೇಳಬೇಕು.

ಶ್ರೀ ಡಿ. ಕೆ. ನಾಯಕರ್.—ಅವರು ಅಕ್ಟೋಬರ್ 1974ರಲ್ಲಿ ಪತ್ರ ಬರೆದಿದ್ದಾರೆ. ಅವರು ಇನ್ನು ಸ್ವಲ್ಪ ದಿವಸದಲ್ಲಿ ಕಾಂಪ್ಲೆಕ್ಷನ್ ಮಾಡಬೇಕು ಎಂದು ಹೇಳಿದ್ದಾರೆ. ಪೇಮೆಂಟ್ ಮಾಡುವುದರಲ್ಲಿ ನಮ್ಮದು ಯಾವುದೂ ಅಭ್ಯಂತರ ಇಲ್ಲ. ಫೈನಲ್‌ಆಗಿ ಚೆಕ್‌ಮಾಡಿದಮೇಲೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—22-6-1971ರಲ್ಲಿ ಕಾರ್ಪೊರೇಷನ್ ಕಮಿಷನರ್‌ರವರು 2 ಪಾರ್ಟಿಗಳನ್ನು ಕರೆಸಿ, ಹಿರಿಯರಿಂಗ್ ಮಾಡಿ, ತಕ್ಷಣ ವಿಲೇವಾರಿಮಾಡಿ ಎಂದು ಸಂಬಂಧಪಟ್ಟ ಅಸಿಸ್ಟೆಂಟ್ ಇಂಜಿನಿಯರ್, ಮತ್ತು ಜೂನಿಯರ್ ಇಂಜಿನಿಯರ್‌ಗೆ ಹೇಳಿದರು. ಈ ಮೆಜರ್‌ಮೆಂಟ್ ಬಗ್ಗೆ ಜೂನಿಯರ್ ಇಂಜಿನಿಯರ್ ಸಹಿ ಮಾಡಿದ್ದಾರೆ. ಈಗ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿರತಕ್ಕಂಥ ನುಬ್ಬರಾಯರು ಆಗ ಅಸಿಸ್ಟೆಂಟ್ ಇಂಜಿನಿಯರ್ ಆಗಿದ್ದರು. ಅವರು ಸರ್ಟಿಫೈ ಮಾಡಬೇಕು. ಅವರು 17 ವರ್ಷ ಆದಮೇಲೆ ನಾವು ಮಾಡತಕ್ಕದ್ದು ಸರಿಹೋಗುವುದಿಲ್ಲವೆಂದು ಪತ್ರ ಬರೆದಿದ್ದಾರೆ. ಇದನ್ನು ಜಾಗ್ರತೆ ವಿಲೇವಾರಿ ಮಾಡಿಸಿ ಒಂದು ತಿಂಗಳೊಳಗಾಗಿ ಹಣವನ್ನು ಕೊಡಿಸುತ್ತೀರಾ ?

ಶ್ರೀ ಡಿ. ಕೆ. ನಾಯಕರ್.—ನಾನು ಪದೇ ಪದೇ ಹೇಳಿದ್ದೇನೆ. ಅದಕ್ಕೆ ಗಮನ ಕೊಟ್ಟು ಮಾಡಿಸುವ ಯೋಚನೆ ಮಾಡುತ್ತೇನೆ ಎಂದು.

## Reconstitution of Village Panchayats in Khanapur Taluk

128. Sri N. B. SIRDESAI (Khanapur).—

Will the Minister for Rural Development and Social Welfare be pleased to state:—

(*a*) whether it has come to the notice of the Government that a few village panchayats have been improperly constituted without any